**CC 1288/2020**
**CW 5 – PW 5**

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಚನ್ನರಾಯಪಟ್ಟಣ

**CC 1288/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಮಂಜುನಾಥ್ | **C.W –5** |
| ತಂದೆಯ ಹೆಸರು | ಃ | ಶಂಕರಪ್ಪ | **P.W –5** |
| ವಯಸ್ಸು | ಃ | 42 ವರ್ಷ | |
| ಉದ್ಯೋಗ | ಃ | ಆಟೋ ಚಾಲಕ | **ಪ್ರಮಾಣ ವಚನ ಬೋಧಿಸಲಾಯಿತು.** |
| ವಾಸ | ಃ | ಹಿರಿಸಾವೆ | ದಿನಾಂಕಃ **18.11.2023** |

---

<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ</u>

ಚಾ ಸಾ 1 ಮತ್ತು 4 ರವರ ಪರಿಚಯವಿದೆ.

ಸಾಕ್ಷಿಗೆ ಕೃತ್ಯ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ ಪಿ 2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 2(ಸಿ) ಎಂದು ಗುರುತಿಸಲಾಯಿತು.

ದಿನಾಂಕ 28.06.2020 ರಂದು ಮಟ್ಟನವಿಲೆಯ ಸರ್ವೀಸ್ ರಸ್ತೆಯಲ್ಲಿ ಪೋಲೀಸರು ಸಂಜೆ 04.00 – 05.00 ರವರೆಗೆ ಮಹಜರ್ ಕ್ರಮ ಜರುಗಿಸಿದ್ದು ಆ ಸಮಯದಲ್ಲಿ ನಾನು ನಿ ಪಿ 2 ಕ್ಕೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನಾನು, ಚಾ ಸಾ 1 ಮತ್ತು 4 ರವರು ಹಾಜರಿದ್ದೆವು.

ಸಾಕ್ಷಿಗೆ ಅಮಾನತ್ತು ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ ಪಿ 3 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 3(ಸಿ) ಎಂದು ಗುರುತಿಸಲಾಯಿತು.

ದಿನಾಂಕ 28.06.2020 ರಂದು ಹಿರಿಸಾವೆ ಪೋಲೀಸ್ ಠಾಣೆಯಲ್ಲಿ ಪೋಲೀಸರು ಮೊಬೈಲ್ ಮತ್ತು ಸಿ ಡಿ ಯನ್ನು ಸುಮಾರು 05.15-06.00 ಗಂಟೆವರೆಗೆ ಅಮಾನತ್ತುಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ನಾನು, ಚಾ ಸಾ 1 ಮತ್ತು 4 ರವರು

ಹಾಜರಿದ್ದೆವು.

ಪೋಲೀಸರು ಅಮಾನತ್ತುಪಡಿಸಿಕೊಂಡ ಫೋನ್ ಮತ್ತು ಸಿ ಡಿ ಡಿಸ್ಕ್ ನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ ಒ 1 ಮತ್ತು 2 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲು</u>** – ಶ್ರೀ ಡಿ ಕೆ ಎಂ ಆರೋಪಿ ಪರ ವಕೀಲರಿಂದ

ಚಾ ಸಾ *4*ರವರು ಸುಮಾರು *20–25* ವರ್ಷಗಳಿಂದ ಪರಿಚಯ.ಚಾ ಸಾ *7*ರವರು ಮಹಜರ್ ಗೆ ಬರುವಂತೆ ಮಧ್ಯಾಹ್ನ *03.00* ಗಂಟೆಗೆ ಕರೆ ಮಾಡಿ ಸ್ಥಳಕ್ಕೆ *04.00* ಗಂಟೆಗೆ ಬರುವಂತೆ ತಿಳಿಸಿರುತ್ತಾರೆ. ನಾನು ಮತ್ತು ಚಾ ಸಾ *4* ಆಟೋದಲ್ಲಿ ಕೃತ್ಯ ಸ್ಥಳಕ್ಕೆ ಹೋಗಿರುತ್ತೇವೆ. ನಾವು ಘಟನಾ ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಚಾ ಸಾ *1* ಮತ್ತು *7*ರವರು ಘಟನಾ ಸ್ಥಳಕ್ಕೆ ಬಂದಿದ್ದರು. ಅವರುಗಳು ಘಟನಾ ಸ್ಥಳಕ್ಕೆ ಹೇಗೆ ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ ಪಿ *2*ನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಎಷ್ಟು ಪುಟಗಳಲ್ಲಿ ಮಹಜರ್ ನ್ನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ ಪಿ *2* ಒಂದೇ ಪುಟ ಅಥವಾ ಅಂಟಿಕೊಂಡ ಹಾಳೆ ಆಗಿತೋ ಇಲ್ಲವೋ ನನಗೆ ಗೊತ್ತಿಲ್ಲ . ಘಟನಾ ಸ್ಥಳದ ಪೂರ್ವ–ಪಶ್ಚಿಮಕ್ಕೆ ಸರ್ವೀಸ್ ರಸ್ತೆ, ಉತ್ತರಕ್ಕೆ ನಾಗರತ್ನಮ್ಮ ಅವರ ಜಮೀನು. ಸರ್ವೀಸ್ ರಸ್ತೆಯಲ್ಲಿ ಮಹಜರ್ ಕ್ರಮ ಜರುಗಿಸಿರುತ್ತಾರೆ ಮುಖ್ಯ ರಸ್ತೆ ಮತ್ತು ಸರ್ವೀಸ್ ರಸ್ತೆಯ ಮಧ್ಯದಲ್ಲಿ ತಡೆಗೋಡೆಯನ್ನು ಅಳವಡಿಸಿರುತ್ತಾರೆ ಎಂದರೆ ಸರಿ. ಸದರಿ ತಡೆಗೋಡೆಯು ಸುಮಾರು *1* ಕಿ.ಮಿ. ವರೆಗೆ ಇರುತ್ತದೆ. ನಿ ಪಿ *2*ನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್. ನಿ ಪಿ *2*ಕ್ಕೆ ಮೊದಲು ಚಾ ಸಾ *4*ರವರು ನಂತರ ನಾನು ಸಹಿ ಮಾಡಿರುತ್ತೇನೆ, ಬೇರೆ ಯಾರೂ ಸಹಿ ಮಾಡಿರುವುದಿಲ್ಲ. ನಂತರ ನಾನು ಮತ್ತು ಚಾ ಸಾ *4*ರವರು ಪೋಲೀಸ್ ಠಾಣೆಗೆ ಹೋಗಿರುತ್ತೇವೆ. ಚಾ ಸಾ *1* ಮತ್ತು *7*ರವರು ಪೋಲೀಸ್ ಠಾಣೆಗೆ ಹೇಗೆ ಹೋದರು ಎಂದು ನನಗೆ ಗೊತ್ತಿಲ್ಲ. ನಿ ಪಿ *3*ನ್ನು ಕೈಯಲ್ಲಿ ಬರೆದಿರುತ್ತಾರೆ. ನಿ ಪಿ *3*ನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಎಂ ಒ *1 oppo* ಕಂಪನಿಯದ್ದಾಗಿದ್ದು ಗೋಲ್ಡ್ ಬಣ್ಣದ್ದಾಗಿರುತ್ತದೆ. ಎಂ ಒ *1* ಮತ್ತು *2*ನ್ನು ಚಾ ಸಾ *1*ರವರು ಪೋಲೀಸರಿಗೆ ನೀಡಿರುತ್ತಾರೆ. ಕೃತ್ಯ ಸ್ಥಳಕ್ಕೆ ಹೋದಾಗ ಎಂ ಒ *1* ಮತ್ತು *2* ಇತ್ತೋ ಇಲ್ಲವೋ ಎಂದು

ನಾನು ಗಮನಿಸಿಲ್ಲ. ಚಾ ಸಾ 1ರವರು ಚಾ ಸಾ 7ರವರಿಗೆ ಮೊಬೈಲ್ ನ್ನು ನೀಡಿದಾಗ ಅದರಲ್ಲಿ ಸಿಮ್ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಎಂ ಒ 1 ಸುಸ್ಥಿತಿಯಲ್ಲಿತು. ನಾನು, ಚಾ ಸಾ 1 ಮತ್ತು 4ರವರು ಸ್ನೇಹಿತರಾಗಿದ್ದು ನಿ ಪಿ 2 ಮತ್ತು 3ನ್ನು ಪೋಲೀಸ್ ಠಾಣೆಯಲ್ಲಿ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಚಾ ಸಾ 1ರವರಿಗೆ ಯಾರೋ ಕರೆ ಮಾಡಿ ಬೈದಿರುವ ವಿಚಾರವಾಗಿ ಪೋಲೀಸರು ಮಹಜರ್ ಕ್ರಮ ಜರುಗಿಸಿರುತ್ತಾರೆ . ಯಾರು ಬೈದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಚಾ ಸಾ 1ರವರು ನನ್ನ ಸ್ನೇಹಿತರಾಗಿದ್ದು ಚಾ ಸಾ 1ರವರಿಗೆ ಸಹಾಯವಾಗಲೆಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮಹಜರ್ ನಲ್ಲಿರುವ ವಿಚಾರಗಳನ್ನು ಹೊರತುಪಡಿಸಿ ಬೇರೆ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

ಮತ್ತು ಜೆ.ಎಂ.ಎಫ್.ಸಿ.ಚನ್ನರಾಯಪಟ್ಟಣ